ವಾದಿಗಳ ಪರ ಹಾಜರುಪಡಿಸಲಾದ ಮಧ್ಯಂತರ ಅರ್ಜಿಗಳನ್ನು ಪುರಸ್ಕರಿಸಿ, ಮುಂದುವರೆದ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು.

ದಿನಾಂಕ 30.10.2023 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿಗಳ ಪರ ಶ್ರೀ ಎಂ.ಪಿ., ವಕೀಲರಿಂದಃ-

6. ನಾನು 1 ರಿಂದ 3 ನೇ ಪ್ರತಿವಾದಿಗಳಿಂದ ಮೆಳ್ಳಹಳ್ಳಿ ಗ್ರಾಮದ ಸರ್ವೇ ನಂ.101/3 ಹಾಗೂ ಸರ್ವೇ ನಂ.101/9 ರಲ್ಲಿನ (ದಾವಾ ಅನುಸೂಚಿ 3 ನೇ) ಸ್ವತ್ತುಗಳನ್ನು ಖರೀದಿಸಿದ ಸಮಯದಲ್ಲಿ ಸದರಿ ಸ್ವತ್ತುಗಳಿಗೆ ಸಂಬಂಧಿಸಿದ ಯಾವ ಯಾವ ದಾಖಲೆಗಳನ್ನು ಪರಿಶೀಲಿಸಿದ್ದೆ ಎನ್ನುವುದು ನನಗೆ ಗೊತ್ತಿಲ್ಲ. ನಾನು ಖರೀದಿಸಿರುವ ದಾವಾ ಅನುಸೂಚಿ 3 ನೇ ಸ್ವತ್ತು ಹಾಗೂ ಇತರ ದಾವಾ ಸ್ವತ್ತುಗಳು ವಾದಿಗಳ ಹಾಗೂ 1 ರಿಂದ 3 ನೇ ಪ್ರತಿವಾದಿಗಳ ಪಿತ್ರಾರ್ಜಿತ ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಇರಬಹುದು.

7. ನಾನು ಖರೀದಿಸಿರುವ ದಾವಾ ಅನುಸೂಚಿ 3 ನೇ ಸ್ವತ್ತನ್ನು ಒಳಗೊಂಡಂತೆ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ವಾದಿಗಳು ಹಾಗೂ 1 ರಿಂದ 3 ನೇ ಪ್ರತಿವಾದಿಗಳ ನಡುವೆ ಈ ದಿನದವರೆಗೂ ವಿಭಾಗವಾಗಿಲ್ಲ? ಎಂದರೆ ಸಾಕ್ಷಿಯು ವಿಭಾಗವಾಗಿದೆ ಎಂದು ನುಡಿಯುತ್ತಾರೆ. ಈ ರೀತಿ ವಾದಿಗಳ ಹಾಗೂ ಪ್ರತಿವಾದಿಗಳ ನಡುವೆ ವಿಭಾಗವಾಗಿದೆ ಎಂದು ಹೇಳುವ ಅಂಶವನ್ನು ಸಾಬೀತುಪಡಿಸುವ ಸಂಬಂಧ ದಾಖಲೆ ಹಾಜರುಪಡಿಸಬಹುದೇ? ಎಂದರೆ ಸಾಕ್ಷಿಯು ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದು ನುಡಿಯುತ್ತಾರೆ. ನಾನು

ಹೇಳುತ್ತಿರುವಂತೆ ಈ ದಿನದವರೆಗೂ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ವಾದಿಗಳು ಹಾಗೂ 1 ರಿಂದ 3ನೇ ಪ್ರತಿವಾದಿಗಳ ನಡುವೆ ಯಾವುದೇ ವಿಭಾಗವಾಗಿಲ್ಲ ಎನ್ನುವುದು ಸರಿಯಲ್ಲ. ಆದ ಕಾರಣ ಈ ದಿನಕ್ಕೂ ಸಹ ದಾವಾ ಸ್ವತ್ತುಗಳು ವಾದಿಗಳ ಹಾಗೂ 1 ರಿಂದ 3ನೇ ಪ್ರತಿವಾದಿಗಳ ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳು ಎನ್ನುವುದು ಸರಿಯಲ್ಲ.

8. ನಿಡಿ-1 ಕ್ರಯಪತ್ರದ ಆಧಾರದ ಮೇರೆಗೆ 1993 ರಲ್ಲಿ ದಾವಾ ಅನುಸೂಚಿ 3ನೇ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ಹೆಸರಿಗೆ ಖಾತೆಯಾಗಿತ್ತು. ಸದರಿ ಖಾತೆಯನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎನ್ನುವುದು ನಿಜ. ನಿಡಿ-1 ಅವಧಿ ಕ್ರಯಪತ್ರವಾಗಿದ್ದು ಅದು ಊರ್ಜಿತವಾದ ದಾಖಲೆಯಾಗಿರಲಿಲ್ಲದ ಕಾರಣ ಅದರ ಆಧಾರದ ಮೇರೆಗೆ ನನ್ನ ಹೆಸರಿಗೆ ಖಾತೆಯಾಗಿರಲಿಲ್ಲ ಎನ್ನುವುದು ಸರಿಯಲ್ಲ. ವಾದಿಗಳ ಹಾಗೂ 1 ರಿಂದ 3ನೇ ಪ್ರತಿವಾದಿಗಳ ತಂದೆ ಬೊಮ್ಮಪ್ಪ ಪೌತಿಯಾದ ನಂತರದಲ್ಲಿ ನೀವು ಖರೀದಿಸಿರುವ ಸ್ವತ್ತಿಗೂ ಹಾಗೂ ಇತರ ದಾವಾ ಸ್ವತ್ತುಗಳಿಗೂ ವಾದಿಗಳ ತಾಯಿಗೆ ಹಾಗೂ ವಾದಿಗಳಿಗೆ ಸಮಾನ ಭಾಗಾಂಶದ ಹಕ್ಕಿದೆ? ಎಂದರೆ ಸಾಕ್ಷಿಯು ನಾನು ಖರೀದಿಸಿರುವ ಸ್ವತ್ತಿಗೆ ಹಕ್ಕಿಲ್ಲ ಎಂದು ನುಡಿಯುತ್ತಾರೆ.

9. ನಿಡಿ-1 ಷರತ್ತು ಬದ್ಧ ಕ್ರಯಪತ್ರವಾಗಿದ್ದ ಕಾರಣ ಸದರಿ ದಾಖಲೆಯು ಊರ್ಜಿತವಾಗಿರಲಿಲ್ಲದ ಕಾರಣದಿಂದ ನಾನು 1 ರಿಂದ 3ನೇ ಪ್ರತಿವಾದಿಗಳಿಂದ ನಿಡಿ-2 ರಂತೆ ಹಕ್ಕು ಖುಲಾಸೆ ಪತ್ರವನ್ನು ಬರೆಸಿಕೊಂಡಿದ್ದೇನೆ ಎನ್ನುವುದು ನಿಜ. ನಿಡಿ-2 ರಂತೆ ನೀವು ಖರೀದಿಸಿರುವ

ಸ್ವತ್ತಿಗೆ ಸಂಬಂಧಿಸಿದಂತೆ 1 ರಿಂದ 3ನೇ ಪ್ರತಿವಾದಿಗಳಿಂದ ಮಾತ್ರ ಹಕ್ಕು ಖುಲಾಸೆ ಪತ್ರವನ್ನು ಬರೆಸಿಕೊಂಡಿರುವ ಕಾರಣ, ಅವರ ಭಾಗಾಂಶದ ಹಕ್ಕಿಗೆ ಸಂಬಂಧಿಸಿದ ಸ್ವತ್ತಿಗೆ ಮಾತ್ರ ನಿಮಗೆ ಹಕ್ಕು ಬರುತ್ತದೆ? ಎಂದರೆ ಸಾಕ್ಷಿಯು ಆ ಸಮಯದಲ್ಲಿ ಅದು ಯಾವುದೂ ಇರಲಿಲ್ಲ ಎಂದು ನುಡಿಯುತ್ತಾರೆ. ನಿಡಿ-1 ಹಾಗೂ ನಿಡಿ-2ರ ದಾಖಲೆಗಳಿಗೆ ವಾದಿಗಳು ಸಹಿ ಮಾಡಿಲ್ಲದ ಕಾರಣ ನಿಡಿ-1 ಹಾಗೂ ನಿಡಿ-2ರ ದಾಖಲೆಗಳು ವಾದಿಗಳ ಭಾಗಾಂಶದ ಹಕ್ಕಿಗೆ ಯಾವುದೇ ರೀತಿ ಚ್ಯುತಿ ತರುವುದಿಲ್ಲ? ಎಂದರೆ ಸಾಕ್ಷಿಯು ಆಗ ಅದು ಯಾವುದೂ ಇರಲಿಲ್ಲ ಎಂದು ನುಡಿಯುತ್ತಾರೆ.

10. ನಿಡಿ-3ರ ಪ್ರಕಾರ ಸರ್ವೇ ನಂ.101/3ರ 2 ಎಕರೆ ಹಾಗೂ ಸರ್ವೇ ನಂ.101/9ರಲ್ಲಿ 4 ಎಕರೆ ಸ್ವತ್ತಿಗೆ ಸಂಬಂಧಿಸಿದಂತೆ ಎಂ.ಆರ್ ನಂ.35/1998-99ರಂತೆ ನನ್ನ ಹೆಸರಿಗೆ ಖಾತೆಯಾಗಿತ್ತು ಎನ್ನುವುದು ನಿಜ. ನಿಡಿ-3ರ ಪ್ರಕಾರ ಎಂ.ಆರ್ ನಂ.35/1998-99ರಂತೆ ನನ್ನ ಹೆಸರಿಗೆ ಖಾತೆಯಾಗುವವರೆಗೂ ನಿಡಿ-1ರ ಕ್ರಯಪತ್ರದ ಆಧಾರದ ಮೇರೆಗೆ ನನ್ನ ಹೆಸರಿಗೆ ಖಾತೆಯಾಗಿರಲಿಲ್ಲ ಎನ್ನುವುದು ಸರಿಯಲ್ಲ. ನಿಡಿ-1ರ ಕ್ರಯಪತ್ರದ ಆಧಾರದ ಮೇರೆಗೆ ನಿಮ್ಮ ಹೆಸರಿಗೆ ಖಾತೆಯಾಗಿರಲಿಲ್ಲ ಎನ್ನುವುದು ಹಾಗೂ ನಿಮ್ಮ ಹೆಸರಿಗೆ ನಿಡಿ-1ರ ಆಧಾರದ ಮೇರೆಗೆ ಖಾತೆಯಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೀರಿ? ಎಂದರೆ ಸಾಕ್ಷಿಯು ಮರೆತುಕೊಂಡಿದ್ದೇನೆ ಎಂದು ನುಡಿಯುತ್ತಾರೆ. 1 ರಿಂದ 3ನೇ ಪ್ರತಿವಾದಿಗಳು ನಿಡಿ-2ರಂತೆ ದಿನಾಂಕ 07.06.1999ರಂದು ನನ್ನ ಹೆಸರಿಗೆ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟ ನಂತರದಲ್ಲಿ ನಿಡಿ-3ರಲ್ಲಿ ನಮೂದಿಸಿರುವ ಎಂ.ಆರ್ ನಂ.35/1998-99ರಂತೆ ನನ್ನ ಹೆಸರಿಗೆ ಖಾತೆಯಾದದ್ದು ಎನ್ನುವುದು ನಿಜ.

11. ನಿಡಿ-4 ಹಾಗೂ ನಿಡಿ-5 ಪಹಣಿ ಪತ್ರಿಕೆಗಳಲ್ಲಿ ಎಂ.ಆರ್ ನಂ.35/1998-99 ರಂತೆ ನಾನು ಖರೀದಿಸಿರುವ ಸ್ವತ್ತಿಗೆ ಸಂಬಂಧಿಸಿದಂತೆ ಖಾತೆಯಾಗಿರುವುದನ್ನು ನಮೂದಿಸಲಾಗಿದೆ ಎನ್ನುವುದು ನಿಜ. ನಿಡಿ-4 ರ 3 ನೇ ಪುಟದಲ್ಲಿನ ಕಾಲಂ ನಂ.9 ರಲ್ಲಿ ಸಿ.ರಾಜಣ್ಣ ಬಿನ್ ಲೇಟ್ ಚನ್ನಬಸವಯ್ಯರವರ ಹೆಸರು ಎಂ.ಆರ್ ನಂ.118/2010-11 ರಂತೆ ದಾಖಲಾಗಿದ್ದು, ಸದರಿ ದಾಖಲೆಯು ಸಿ.ರಾಜಣ್ಣರವರಿಗೆ ಸಂಬಂಧಿಸಿದ್ದು ನನಗೆ ಸಂಬಂಧಿಸಿದ್ದಲ್ಲ ಎನ್ನುವುದು ಸರಿಯಲ್ಲ. ನಿಡಿ-3 ರಲ್ಲಿ ನಮೂದಿಸಲಾದ ಎಂ.ಆರ್ ನಂ.118/2010-11 ರ ಖಾತೆಯು ನನಗೆ ಸಂಬಂಧಿಸಿದ್ದಲ್ಲ ಎನ್ನುವುದು ನಿಜ. ಅದೇ ರೀತಿ ಸದರಿ ದಾಖಲೆಯು ದಾವಾ ಸ್ವತ್ತುಗಳಿಗೆ ಸಂಬಂಧಿಸಿದ್ದಲ್ಲ ಎನ್ನುವುದು ನಿಜ. ನಿಡಿ-1 ರಿಂದ ನಿಡಿ-8 ದಾಖಲೆಗಳನ್ನು ಈ ದಾವೆಯ ಉದ್ದೇಶಕ್ಕಾಗಿ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎನ್ನುವುದು ಸರಿಯಲ್ಲ.

12. ನನ್ನ ಲಿಖಿತ ಹೇಳಿಕೆಯ 15 ನೇ ಖಂಡಿಕೆಯಲ್ಲಿ ಹಾಗೂ ನನ್ನ ಪ್ರಮಾಣಪತ್ರದ 6 ನೇ ಖಂಡಿಕೆಯಲ್ಲಿ ದಾವಾ ಅನುಸೂಚಿ 4 ನೇ ಸ್ವತ್ತಿನ ಕಂದಾಯ ದಾಖಲೆಗಳಲ್ಲಿ ವಿಸ್ತೀರ್ಣ ವ್ಯತ್ಯಾಸ ಬಂದಿದ್ದು ಅದನ್ನು ನಾನು ಪ್ರಶ್ನಿಸಿ ಆ ವ್ಯತ್ಯಾಸವು ನೋಂದಾಯಿತ ಕ್ರಯಪತ್ರದ ಅನುಗುಣವಾಗಿ ತಿದ್ದುಪಡಿ ಮಾಡಲ್ಪಟ್ಟಿರುತ್ತದೆ ಎಂದು ಬರೆಸಿದ್ದು, ಸದರಿ ತಿದ್ದುಪಡಿಯನ್ನು ಯಾರು ಮಾಡಿದ್ದಾರೆ ಎನ್ನುವುದನ್ನು ಹೇಳಲು ನನಗೆ ಗೊತ್ತಿಲ್ಲ. ಸದರಿ ಕಂದಾಯ ದಾಖಲೆಯಲ್ಲಿನ ವಿಸ್ತೀರ್ಣದ ವ್ಯತ್ಯಾಸವನ್ನು ಯಾರ ಮುಂದೆ ಪ್ರಶ್ನಿಸಿದ್ದೆ ಎನ್ನುವುದನ್ನು ಹೇಳಲು ನನಗೆ ಗೊತ್ತಿಲ್ಲ. ಆ ರೀತಿ ಪಶ್ನೆ ಮಾಡುವಾಗ ಅದಕ್ಕೆ ವಾದಿಗಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಹಾಗೂ ಅವರಿಗೆ ಯಾವುದೇ ನೋಟಿಸ್ ಕೊಟ್ಟಿಲ್ಲ.

ಕ್ರಯಪತ್ರದ ಅನುಗುಣವಾಗಿ ತಿದ್ದುಪಡಿ ಮಾಡಲಾಗಿದೆ ಎಂದು ಬರೆಸಿದ್ದು ಸದರಿ ತಿದ್ದುಪಡಿಯಾದ ದಾಖಲೆಯನ್ನು ನಾನು ಹಾಜರುಪಡಿಸಬಹುದು. ನಿಡಿ-1 ಹಾಗೂ ನಿಡಿ-2 ರ ದಾಖಲೆಗಳ ಆಧಾರದ ಮೇರೆಗೆ ನನ್ನ ಹೆಸರಿಗೆ ಖಾತೆಯಾಗಿರಲಿಲ್ಲ ಎನ್ನುವುದು ಹಾಗೂ ಆ ನಂತರದಲ್ಲಿ ವಾದಿಗಳಿಗೆ ಯಾವುದೇ ನೋಟಿಸ್ ಕೊಡಿಸದೇ ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ.

13. ನನ್ನ ಲಿಖಿತ ಹೇಳಿಕೆಯ 16 ನೇ ಖಂಡಿಕೆಯಲ್ಲಿ ವಾದಿಗಳು ಸದರಿ ಖಂಡಿಕೆಯಲ್ಲಿ ಕಾಣಿಸಲಾದ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದು ಬರೆಸಿದ್ದು, ಸರ್ವೇ ನಂ.17/1 ರ ಸ್ವತ್ತು ದಾವಾ ಅನುಸೂಚಿ 2 ನೇ ಸ್ವತ್ತು ಎನ್ನುವುದು ನಿಜ. ನನ್ನ ಲಿಖಿತ ಹೇಳಿಕೆಯ 16 ಹಾಗೂ 17 ನೇ ಖಂಡಿಕೆಗಳಲ್ಲಿ ಹಾಗೂ ನನ್ನ ಪ್ರಮಾಣಪತ್ರದ 7 ಹಾಗೂ 8 ನೇ ಖಂಡಿಕೆಗಳಲ್ಲಿ ಸರ್ವೇ ನಂ.16/4, 101/8 ಹಾಗೂ 160/3 ರ ಸ್ವತ್ತುಗಳು 1 ರಿಂದ 3 ನೇ ಪ್ರತಿವಾದಿಗಳಿಗೆ ಸೇರಿದ್ದು ಎಂದು ಬರೆಸಿದ್ದು, ಸದರಿ ಸ್ವತ್ತುಗಳು ಅವರಿಗೆ ಸೇರಿದ್ದು ಎನ್ನುವುದನ್ನು ಸಾಬೀತುಪಡಿಸುವ ಸಂಬಂಧ ನಾನು ದಾಖಲೆ ಹಾಜರುಪಡಿಸಿದ್ದೇನೆ. ಸದರಿ ಸ್ವತ್ತುಗಳು 1 ರಿಂದ 3 ನೇ ಪ್ರತಿವಾದಿಗಳಿಗೆ ಸೇರಿದ್ದು ಎನ್ನುವುದನ್ನು ಸಾಬೀತುಪಡಿಸುವ ಸಂಬಂಧ ನಾನು ಯಾವುದೇ ದಾಖಲೆ ಹಾಜರುಪಡಿಸದೇ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಖರೀದಿಸಿರುವ ಸರ್ವೇ ನಂ.101/3 ರ 2 ಎಕರೆ ಹಾಗೂ ಸರ್ವೇ ನಂ.101/9 ರ 4 ಎಕರೆ ಸ್ವತ್ತುಗಳಲ್ಲಿ ವಾದಿಗಳಿಗೂ ಸಹ ಸಮಾನವಾದ ಭಾಗಾಂಶದ ಹಕ್ಕಿದ್ದು ನಾನು ವಾದಿಗಳಿಗೆ ಗೊತ್ತಿಲ್ಲದಂತೆ ಸದರಿ ಸ್ವತ್ತುಗಳನ್ನು 1 ರಿಂದ 3 ನೇ

ಪ್ರತಿವಾದಿಗಳಿಂದ ಕ್ರಯಕ್ಕೆ ಪಡೆದುಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಈ ದಿನದವರೆಗೂ ವಾದಿಗಳ ಹಾಗೂ 1 ರಿಂದ 3ನೇ ಪ್ರತಿವಾದಿಗಳ ನಡುವೆ ವಿಭಾಗವಾಗಿಲ್ಲದ ಕಾರಣ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ವಾದಿಗಳಿಗೆ ಸಮಾನ ಭಾಗಾಂಶದ ಹಕ್ಕಿದೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.